ಅಸಲು ದಾವಾ ಸಂಖ್ಯೆ 168/2014

ಡಿ ಡಬ್ಲ್ಯೂ: 1

**ದಿನಾಂಕ : 28.01.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ – ವಾದಿ ಪರ ಶ್ರೀ ಎಂ ಆರ್ ಕೆ ವಕೀಲರಿಂದಃ**

ನನ್ನ ದೊಡ್ಡಪ್ಪ ಮತ್ತು ತಾತನಿಗೆ ಸರ್ಕಾರದಿಂದ ಮಂಜೂರಾಗಿದ್ದ ಸ್ವತ್ತುಗಳಲ್ಲಿ ವಾದಿಗೆ ವಿಭಾಗ ಕೊಡಲಾಗಿತ್ತೋ ಲ್ಲವೋ ನನಗೆ ಗೊತ್ತಿಲ್ಲ. ಆ ಬಗ್ಗೆ ನಾನು ನನ್ನ ತಂದೆಯನ್ನು ಕೇಳಿ ತಿಳಿದುಕೊಂಡಿರುವುದಿಲ್ಲ. ಸರ್ವೆ ನಂಬರ್ 840 ಕ್ಕೆ ಸಂಬಂಧಿಸಿದ 1970 ಕ್ಕೆ ಮೊದಲಿನ ದಾಖಲಾತಿಗಳನ್ನು ನಾನು ಪಡೆದುಕೊಂಡಿರುತ್ತೇನೆ. ಅದನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ್ 840 ಸ್ವತ್ತನ್ನು ಮಂಜೂರಾತಿ ಕೋರಿ ಯಾರು ಅರ್ಜಿಯನ್ನು ದಾಖಲು ಮಾಡಿರುತ್ತಾರೆ ಎಂದು ನಾನು ದಾಖಲಾತಿಯನ್ನು ಪಡೆದುಕೊಂಡಿಲ್ಲ. ನಿಪಿ-5ರಂತೆ ವಾದಿ ಮಾದೇವಯ್ಯ ರವರು ಸರ್ವೆ ನಂಬರ್ 840 ಸ್ವತ್ತನ್ನು ಮಂಜೂರು ಮಾಡಿಕೊಡುವಂತೆ ಅರ್ಜಿ ದಾಖಲು ಮಾಡಿದ್ದರು ಎಂದರೆ ಸರಿ. ಸದರಿ ನಿಪಿ-5 ರಲ್ಲಿ, ಮಾದಯ್ಯರವರು ವ್ಯವಸಾಯ ಮಾಡುತ್ತಿದ್ದ ಸ್ವತ್ತಿಗೆ ಸಂಬಂಧಿಸಿದಂತೆ ಅರ್ಜಿಯನ್ನು ದಾಖಲು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು, ಒಟ್ಟು ಕುಟುಂಬದ ಸದಸ್ಯರು ಸ್ವತ್ತಿನಲ್ಲಿ ವ್ಯವಸಾಯ ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

ಮಾದಯ್ಯರವರಿಗೆ ಸರ್ವೆ ನಂಬರ್ 840 ಸ್ವತ್ತನ್ನು ಮಂಜೂರು ಮಾಡುವ ಮೊದಲು ಸದರಿ ಸ್ವತ್ತನ್ನು ಒಟ್ಟು ಕುಟುಂಬದ ಸದಸ್ಯರು ಅನುಭವಿಸಿಕೊಂಡು ಬರುತ್ತಿರುತ್ತಾರೆ ಎಂಬ ಬಗ್ಗೆ ನನ್ನ ದೊಡ್ಡಪ್ಪ, ತಂದೆ ಮತ್ತು ತಾತರವರು ಹೇಳಿಕೆ ನೀಡಿರುತ್ತಾರೆ. ಆ ಸಂಬಂಧ ಸದರಿ ಮಂಜೂರು ಮಾಡಲಾದ ಪೂರ್ಣ ಕಡತವನ್ನು ನಾನು ಪಡೆದುಕೊಂಡಿರುತ್ತೇನೆ. ನ್ಯಾಯಾಲಯದ ಸಮಕ್ಷಮ ಹಾಜರು ಪಡಿಸಿರುವ ದಾಖಲಾತಿಗಳನ್ನು ಹೊರತು ಪಡಿಸಿ ನನ್ನ ಬಳಿ ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದ ಬೇರೆ ದಾಖಲಾತಿಗಳು ಇರುತ್ತವೆ. ನನ್ನ ದೊಡ್ಡಪ್ಪ, ನನ್ನ ತಾತ ಮತ್ತು ತಂದೆಗೆ ವ್ಯಕ್ತಿಗತವಾಗಿ ಅವರು ವ್ಯವಸಾಯ ಮಾಡುತ್ತಿದ್ದ ಸ್ವತ್ತನ್ನು ಮಂಜೂರು ಮಾಡಿರುತ್ತಾರೆ ಎಂದರೆ ಸರಿ. ನನ್ನ ತಾತ ಸಿದ್ದಯ್ಯನಪುರದ ಮಾದಯ್ಯ ಬದುಕಿರುವಾಗ ದಾವಾ ಅನುಸೂಚಿತ ಸ್ವತ್ತು ಒಟ್ಟು ಕುಟುಂಬದ ಸ್ವತ್ತಾಗಿರುತ್ತದೆ ಅದನ್ನು ಖಾತೆ ಮಾಡಿಕೊಡಿ ಎಂಬ ಬಗ್ಗೆ ಅರ್ಜಿಯನ್ನು ದಾಖಲು ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ.

ನಾನು ಹಾಜರು ಪಡಿಸಿರುವ ಪಹಣಿ ಪತ್ರಿಕೆಗಳಲ್ಲಿ ಪೌತಿ ಖಾತೆಯ ಆಧಾರದ ಮೇರೆಗೆ ಸ್ವತ್ತುಗಳು ವರ್ಗಾವಣೆಯಾಗಿರುತ್ತದೆ ಎಂದರೆ ಸರಿ. ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ಭಾಗಾಂಶದ ಪ್ರಕಾರ ನನ್ನ ತಂದೆಗಾಗಲೀ ನನ್ನ ದೊಡ್ಡಪ್ಪನಿಗಾಗಲೀ ಖಾತೆ ವರ್ಗಾವಣೆಯಾಗಿಲ್ಲ ಎಂದರೆ ಸರಿಯಲ್ಲ. 1960 ರಿಂದ 1970ನೇ ಸಾಲಿನವರೆಗೂ ನನ್ನ ತಾತ ಆರೋಗ್ಯವಾಗಿ ಇದ್ದರು ಎಂದರೆ ಸರಿ. 1960 ನೇ ಸಾಲಿನಲ್ಲಿ ಯಾರು ಮನೆ ಯಜಮಾನಿಕೆ ನಿಭಾಯಿಸುತ್ತಿದ್ದರು ಎಂಬ ಬಗ್ಗೆ ದಾಖಲಾತಿಗಳು ನನ್ನ ಬಳಿ ಇವೆ. ಸಾಕ್ಷಿಯು ಮುಂದುವರೆದು ವಂಶವೃಕ್ಷದ ಪ್ರಕಾರ ನನ್ನ ದೊಡ್ಡಪ್ಪ ಹಿರಿಯ ಮಗನಾಗಿದ್ದು ಆತನೇ ಕುಟುಂಬದ ಎಲ್ಲಾ ಆಗುಹೋಗುಗಳನ್ನು ನಿರ್ವಹಿಸುತ್ತಿದ್ದರು ಎಂದು ನುಡಿಯುತ್ತಾರೆ. ಅದನ್ನು ಹೊರತು ಪಡಿಸಿ ಆ ಸಂಬಂಧ ದಾಖಲಾತಿಗಳು ಇಲ್ಲ ಎಂದರೆ ಸರಿ. ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ತಂದೆ, ದೊಡ್ಡಪ್ಪ ಒಟ್ಟು ಕುಟುಂಬದ ಸದಸ್ಯರ ಪರವಾಗಿ ಕಂದಾಯ ಪಾವತಿ ಮಾಡಿದ ದಾಖಲೆಗಳು ಇವೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಮಾದಯ್ಯ ಬದುಕಿರುವಾಗ ವ್ಯವಸಾಯವನ್ನು ಹೊರತು ಪಡಿಸಿ ಬೇರೆ ಯಾವುದೇ

ಅಸಲು ದಾವಾ ಸಂಖ್ಯೆ 168/2014

ಡಿ ಡಬ್ಲ್ಯೂಃ 1

ಮೂಲಗಳಿಂದ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರಿಗೆ ಸರ್ವೆ ನಂಬರ್ 854 ರಲ್ಲಿ ಸ್ವತ್ತು ಇದ್ದು ಆ ಮೂಲಕ ಆದಾಯ ಇತ್ತು ಎಂದು ನುಡಿಯುತ್ತಾರೆ. ಮಾದಯ್ಯರವರ ಕಸುಬು ವ್ಯವಸಾಯ ಎಂದರೆ ಸಾಕ್ಷಿಯು ಅದರ ಜೊತೆ ಕೂಲಿ ಸಹಾ ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

ನನ್ನ ತಂದೆ, ದೊಡ್ಡಪ್ಪ ಅಥವಾ ತಾತ ಬದುಕಿದ್ದ ಸಮಯದಲ್ಲಿ ವಿಭಾಗ ಕೋರಿ ಯಾವುದೇ ದಾವೆ ದಾಖಲು ಮಾಡಿಲ್ಲ. ಮಾದಯ್ಯರವರು ಹಾಜರು ಪಡಿಸಿರುವ ನಿಪಿ-5 ರಂತೆ ದಾವಾ ಅನುಸೂಚಿತ ಸ್ವತ್ತನ್ನು ಅವರು ವ್ಯಕ್ತಿಗತವಾಗಿ ವ್ಯವಸಾಯ ಮಾಡುತ್ತಿದ್ದು ಆ ಮೂಲಕ ಸ್ವತ್ತು ಮಂಜೂರಾಗಿತ್ತು ಎಂದರೆ ಸರಿಯಲ್ಲ. ಅದು ಒಟ್ಟು ಕುಟುಂಬದ ಸ್ವತ್ತು ಎಂದು ಸಾಕ್ಷಿಯು ಸ್ವತಃ ನುಡಿಯುತಾರೆ. 1960ನೇ ಸಾಲಿನಲ್ಲಿ ಎಲ್ಲರೂ ಒಟ್ಟಾಗಿ ಒಟ್ಟು ಕುಟುಂಬದಲ್ಲಿ ವಾಸ ಮಾಡುತ್ತಿದ್ದರು ಹಾಗೂ ವ್ಯವಸಾಯ ಮಾಡುತ್ತಿದ್ದರು ಎಂಬ ಬಗ್ಗೆ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ಎ.ಸಿ.ಮತ್ತು ಡಿ.ಸಿ. ನ್ಯಾಯಾಲಯಗಳಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ವಿವಾದ ಬಗೆಹರಿಸಿಕೊಳ್ಳುವಂತೆ ಆದೇಶವಾಗಿತ್ತು ಎಂದರೆ ಸರಿ. ಎ ಸಿ ನ್ಯಾಯಾಲಯದಲ್ಲಿ ಆದೇಶವಾದ ನಂತರ ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿದ್ದೆ ಎಂದರೆ ನನಗೆ ಗೊತ್ತಿಲ್ಲ. ಎ ಸಿ ನ್ಯಾಯಾಲಯದಲ್ಲಿ ಆದೇಶವಾದ ನಂತರ ನಾವು ದಾವಾ ಅನುಸೂಚಿತ ಸ್ವತ್ತಿನಲ್ಲಿ ಅಕ್ರಮವಾಗಿ ಸ್ವಾಧೀನಾನುಭವದಲ್ಲಿ ಇದ್ದ ಕಾರಣಕ್ಕೆ ದೂರು ದಾಖಲಾಗಿತ್ತು ಎಂದರೆ ಸರಿಯಲ್ಲ.

ದಿನಾಂಕಃ 09.09.1982 ರಂದು ವಿಭಾಗಪತ್ರವಾಗಿತ್ತು ಎಂಬುದಾಗಿ ತಿಳಿಸಿರುತ್ತೇನೆ. ಸದರಿ ವಿಭಾಗ ಪತ್ರಕ್ಕೆ ನನ್ನ ಅತ್ತೆಯರ ಸಮ್ಮತಿ ಇತ್ತು ಸಹಿ ಇರಲಿಲ್ಲ.ಆ ಬಗ್ಗೆ ಸದರಿ ವಿಭಾಗ ಪತ್ರದಲ್ಲಿ ಒಕ್ಕಣೆ ಇರಲಿಲ್ಲ ಆದರೆ ಮೌಖಿಕವಾಗಿ ಒಪ್ಪಿಗೆ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಸದರಿ ವಿಭಾಗ ಪತ್ರವನ್ನು ನಾವು ಸೃಷ್ಟಿಸಿಕೊಂಡಿರುತ್ತೇವೆ, ಸದರಿ ವಿಭಾಗ ಪತ್ರಕ್ಕೆ ವಾದಿ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಒಂದು ಕಾರರಿನ ಬಗ್ಗೆ ಹೇಳಿದ್ದು ಸದರಿ ಕರಾರಿಗೂ ಸಹಾ ಮಾದಯ್ಯ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರ ಮಕ್ಕಳ ಸಮ್ಮುಖದಲ್ಲಿ ಮಾದಯ್ಯ ಸಹಿ ಮಾಡಿದ್ದರು ಎಂದು ನುಡಿಯುತ್ತಾರೆ. ಆ ದಿನ ಅವರ ಮಕ್ಕಳು ಸಹಿ ಪಡೆಯಲು ತೊಂದರೆ ಇರಲಿಲ್ಲ.

ಒಟ್ಟು ಕುಟುಂಬದ ವಿಭಾಗದ ನಂತರ ಮಾದಯ್ಯರವರು ಕ್ರೈಸ್ತ ಮತಕ್ಕೆ ಮತಾಂತರಗೊಂಡಿದ್ದರು ಎಂದು ಸಾಕ್ಷಿಯು ನುಡಿಯುತ್ತಾರೆ. 1982 ರ ನಂತರ ಮಾದಯ್ಯರವರು ಮತಾಂತರ ಹೊಂದಿದ್ದರು ಎಂಬ ಬಗ್ಗೆ ದಾಖಲಾತಿಗಳು ಇವೆ. ನ್ಯಾಯಾಲಯಕ್ಕೆ ಹಾಜರ ಪಡಿಸಿಲ್ಲ ಹಾಜರು ಪಡಿಸುತ್ತೇವೆ. ದಾವಾ ಅನುಸೂಚಿತ ಸ್ವತ್ತಿಗೆ ವಿದ್ಯುತ್ ಚ್ಛಕ್ತಿ ಸಂಪರ್ಕ ಪಡೆದಿರುವುದು ಐ ಎನ್ ಹೆಚ್ 10/1985-86 ರಂತೆ ಎಂದರೆ ಸರಿ. ನಾನು ಹಾಜರು ಪಡಿಸಿರುವ ನಿಡಿ-1 ರಿಂದ ನಿಡಿ-5 ಹಾಗೂ ನಿಡಿ-8 ರಿಂದ ನಿಡಿ-12 ದಾಖಲಾತಿಗಳನ್ನೂ ಸಹಾ ಐ ಎನ್ ಹೆಚ್ 10/1985-86 ರಂತೆ ಪಡೆದುಕೊಂಡಿರುತ್ತೇವೆ ಎಂದರೆ ಸರಿ. ನಿಡಿ-2 ರಂತೆ ವಿದ್ಯುತ್ ಚ್ಛಕ್ತಿ ಸಂಪರ್ಕ ಪಡೆಯಲು ಯಾರು ಅರ್ಜಿಯನ್ನು ದಾಖಲು ಮಾಡಿರುತ್ತಾರೆ ಹಾಗೂ ಯಾವ ಯಾವ ದಾಖಲೆಗಳನ್ನು ಹಾಜರು ಪಡಿಸಿರುತ್ತಾರೆ ಎಂದು ನನಗೆ ಗೊತ್ತು. ನಿಡಿ-2 ರಲ್ಲಿರುವ ಚೌಡಯ್ಯ ಬಿನ್ ಮಾದಯ್ಯ ನನ್ನ ತಾತ ಆಗಿರುತ್ತಾರೆ.

ವಾದಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಹಾಜರು ಪಡಿಸಿರುವ ದಾಖಲಾತಿಗಳನ್ನು ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ನಾನು ಪಹಣಿ ಪತ್ರಿಕೆಯಲ್ಲಿ ನಮೂದಾಗಿರುವ ಹೆಸರಿನ ಆಧಾರದ

ಮೇಲೆ ನಿಡಿ–4 ರಂತೆ ಸಾಲ ಪಡೆದಿದ್ದೆ ಎಂದರೆ ಸರಿ. ಸಾಲ ಮಂಜೂರು ಮಾಡುವ ಮುನ್ನ ಸ್ಥಳ ಪರಿಶೀಲನೆ ಮಾಡಿ, ಇಲಾಖೆಯವರು ವಿಚಾರಣೆ ಮಾಡಿದ ನಂತರ ಸಾಲ ಮಂಜೂರು ಮಾಡಿದ್ದರು. ಸಾಲ ನೀಡುವ ಮೊದಲು ಬ್ಯಾಂಕಿನವರು ಯಾವೆಲ್ಲಾ ಪ್ರಕ್ರಿಯೆಗಳನ್ನು ನೆರವೇರಿಸಿದ್ದರು ಎಂಬ ಬಗ್ಗೆ ಸಂಬಂಧಪಟ್ಟ ಬ್ಯಾಂಕಿನಿಂದ ದಾಖಲೆಗಳನ್ನು ಪಡೆದುಕೊಂಡಿಲ್ಲ. ಸಾಕ್ಷಿಯು ಮುಂದುವರೆದು ಪಡೆದುಕೊಂಡಿರುತ್ತೇನೆ ಎಂದು ತಿಳಿಸಿರುತ್ತಾರೆ

ನಾನು ಹಾಜರು ಪಡಿಸಿರುವ ನಿಡಿ–5 ಕ್ಕೆ ಸಂಬಂಧಿಸಿದಂತೆ ನೋಟೀಸ್ ಕೊಟ್ಟು ಆ ನಂತರ ದಾಖಲೆ ಪಡೆದಿರುವ ಬಗ್ಗೆ ದಾಖಲಾತಿಗಳು ಇದೆ. ಆ ದಿನ ಯಾವ ಸಾಕ್ಷಿಗಳ ಆಧಾರದ ಮೇರೆಗೆ ಮಹಜರ್ ಜರುಗಿಸಲಾಗಿತ್ತು ಎಂಬ ಬಗ್ಗೆ ಅಲ್ಲಿ ಸಾಕ್ಷಿಗಳ ರುಜು ಇಲ್ಲ ಎಂದರೆ ಸಾಕ್ಷಿಯು ಆ ದಿನ ರುಜು ತೆಗದುಕೊಳ್ಳಲಾಗಿತ್ತು ಎಂದು ನುಡಿಯುತ್ತಾರೆ. ಸ್ಥಳ ತನಿಖೆ ಮಾಡುವಂತೆ ನನ್ನ ತಂದೆ ಅರ್ಜಿ ದಾಖಲು ಮಾಡಿದ್ದರು. ಆಗ ಅಕ್ಕಪಕ್ಕದವರಿಗೆ ನೋಟೀಸ್ ಕೊಟ್ಟಿದ್ದರು ಆ ಬಗ್ಗೆ ದಾಖಲೆ ಇದೆ. ಕಾನೂನುಬದ್ಧ ಪ್ರಕ್ರಿಯೆಯನ್ನು ಅಳವಡಿಸಿಕೊಳ್ಳದೇ ಅಕ್ರಮವಾಗಿ ನಮೂದಾಗಿದ್ದ ಪಹಣಿ ಪತ್ರಿಕೆಗಳ ಆಧಾರದ ಮೇಲೆ ದಾಖಲಾತಿಗಳನ್ನು ಪಡೆಯಲಾಗಿದೆ ಎಂದರೆ ಸರಿಯಲ್ಲ.

ನಾನು ಹಾಜರು ಪಡಿಸಿರುವ ನಿಡಿ–6 ಮತ್ತು ನಿಡಿ–7 ದಾಖಲಾತಿಗಳು ನಾನು ಕಂದಾಯ ಇಲಾಖೆಯವರ ಜೊತೆ ಶಿರೀಕ್ಕಾಗಿ ಪಡೆದ ದಾಖಲೆಗಳು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನಾಗಲೀ, ಚೌಡಯ್ಯ ಅವರಗಾಲೀ ಸ್ವತ್ತಿನ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಚೌಡಯ್ಯರವರು ನವರು ಐದು ಎಕರೆಗಿಂತ ಹೆಚ್ಚು ವಿಸ್ತೀರ್ಣದ ಆಸ್ತಿಯನ್ನು ಹೊಂದಿದ್ದರು ಎಂದರೆ ಸರಿಯಲ್ಲ. ನಮ್ಮ ಬಳಿ ಇರುವಾಗ ಅವರಿಗೆ ಕೇವಲ ಮೂರು ಎಕರೆ ಸ್ವತ್ತು ಮಾತ್ರ ಇತ್ತು ಎಂದು ನುಡಿಯುತ್ತಾರೆ. ಸರ್ವೆ ನಂಬರ್ 861 ಯಾರ ಹೆಸರಿಗೆ ಮಂಜೂರಾಗಿತ್ತು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ದಾಖಲಾತಿಗಳನ್ನು ಸೃಷ್ಟಿಸಿಕೊಳ್ಳು ಸಲುವಾಗಿ ಸಾಲ ಪಡೆದ ಬಗ್ಗೆ ಹಾಗೂ ಸಣ್ಣ ಹಿಡುವಳಿದಾರರು ಎಂಬ ಬಗ್ಗೆ ದಾಖಲೆ ಪಡೆಯಲಾಗಿದೆ ಎಂದರೆ ಸರಿಯಲ್ಲ.

ಸರ್ವೆ ನಂಬರ್ 840 ರಲ್ಲಿ ಮಾದಯ್ಯನವರಿಗೆ 1 ಎಕರೆ, ಸಿದ್ದಯ್ಯರವರಿಗೆ 2 ಎಕರೆ ಹಾಗೂ ಚೌಡಯ್ಯರವರಿಗೆ 2 ಎಕರೆ ಇರುವುದಾಗಿ ನನ್ನ ಪ್ರಮಾಣಪತ್ರದಲ್ಲಿ ಬರೆಸಲಾಗಿದೆ ಎಂದರೆ ಸರಿ. ನಾನು ಹಾಜರು ಪಡಿಸಿರುವ ನಿಡಿ–15 ರಂತೆ ಮಾದಯ್ಯರವರಿಗೆ 1 ಎಕರೆ ಇರುವ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಭಾಗಾಂಶದ ಪ್ರಕಾರ ಇರುತ್ತದೆ ಆ ಬಗ್ಗೆ ದಾಖಲಾತಿಗಳು ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಹಾಜರು ಪಡಿಸಿರುವ ನಿಡಿ–17 ರಲ್ಲಿ ಯಾವ ಸಾಲಿನದ್ದು ಹಾಗೂ ಯಾರು ಅನುಭವ ಸ್ವಾಧೀನದಲ್ಲಿ ಇದ್ದಾರೆ ಎಂಬ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ದೃಡೀಕರಣ ಪತ್ರವಾದ ಕಾರಣ ಆ ಬಗ್ಗೆ ನಮೂದು ಇರುವುದಿಲ್ಲ ಅದು 1982 ನೇ ಸಾಲಿನದ್ದಾಗಿರುತ್ತದೆ ಎಂದು ನುಡಿಯುತ್ತಾರೆ. ನಿಡಿ–18 ರಲ್ಲಿ ಎಂ ಆರ್ 15/1982–83 ಎಂಬುದಾಗಿ ನಮೂದು ಇದ್ದು ಸದರಿ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಸದರಿ ಹಕ್ಕು ಬದಲಾವಣೆ ಪ್ರಕ್ರಿಯೆಯು ಭಾಗಂಶದ ಆಧಾರದ ಮೇಲೆ ಆಗಿತ್ತು. ಸದರಿ ನಿಡಿ–18 ರಲ್ಲಿ ತೆಗೆಯಲಾದ ಮಾದಯ್ಯರವರು ಈ ದಾವೆಯ ವಾದಿ ಎಂದರೆ ಸರಿ. ಸಾಕ್ಷಿಯು ಮುಂದುವರೆದು, ಒಟ್ಟು ಕುಟುಂಬದಲ್ಲಿ ಇದ್ದಾಗ ನಮೂದಾಗಿತ್ತು ಎಂದು ನುಡಿಯುತ್ತಾರೆ.

ಡಿ ಡಬ್ಲ್ಯೂಃ 1

ನಾನು ಹಾಜರು ಪಡಿಸಿರುವ ನಿಡಿ-19 ಹಾಗೂ ನಿಡಿ-1 ರಲ್ಲಿರುವ ಖಾತೆ ಸಂಖ್ಯೆಯಲ್ಲಿ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು ತಪ್ಪಾಗಿ ನಮೂದಾಗಿರಬಹುದು ಎಂದು ನುಡಿಯುತ್ತಾರೆ. ನಾನು ಹಾಜರು ಪಡಿಸಿರುವ ನಿಡಿ-25 ರ ಸ್ವತ್ತು ಸರ್ವೆ ನಂಬರ್ 840 ಕ್ಕೆಸೇರಿದ್ದಾಗಿರುತ್ತದೆ. ಅದಕ್ಕೆ ಪೂರಕವಾದ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಸರ್ವೆ ನಂಬರ್ 840 ರಲ್ಲಿ ವಾಸದ ನಿವೇಶನವನ್ನಾಗಿ ಮಾಡಲು ಭೂ ಪರಿವರ್ತನೆ ಆದೇಶವಾಗಿತ್ತಾ ಎಂದರೆ ಯಾವುದೇ ಆದೇಶವಾಗಿಲ್ಲ ಎಂದು ನುಡಿಯುತ್ತಾರೆ. ನಿಡಿ-25 ನ್ನು ನೀಡುವ ಮೊದಲು ಸ್ಥಳ ಪರಿಶೀಲನೆ ಮಾಡಿದ್ದರು ಆ ಬಗ್ಗೆ ದಾಖಾತಿಗಳು ಇರುವುದಿಲ್ಲ. ನಾನು ಹಾಜರು ಪಡಿಸಿರುವ ನಿಡಿ-27 ರಿಂದ ನಿಡಿ-45 ದಾಖಲಾತಿಗಳು ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿದ್ದಲ್ಲ ಎಂದರೆ ಸರಿಯಲ್ಲ. ಈ ದಾವೆಗಾಗಿ ಸದರಿ ದಾಖಲಾತಿಗಳನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಸರ್ವೆ ನಂಬರ್ 841/ ನನ್ನ ತಾತನಿಗೆ ಮಂಜೂರಾಗಿದ್ದ ಸ್ವತ್ತು ಎಂದರೆ ಸರಿ. ಸಾಕ್ಷಿಯು ಒಂದು ದಾಖಲಾತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-14 ಎಂದು ಗುರುತಿಸಲಾಯಿತು. ನನ್ನ ತಾತನ ಒಪ್ಪಿಗೆಯ ಮೇರೆಗೆ ವಾದಿ ಮಾದಯ್ಯರವರಿಗೆ ಸ್ವತ್ತು ಮಂಜೂರಾಗಿತ್ತು ಎಂಬ ಬಗ್ಗೆ ತಿಳಿಸಿರುತ್ತೇನೆ, ಆ ಬಗ್ಗೆ ದಾಖಲಾತಿಗಳು ಇದೆಯೇ ಎಂದರೆ ಸಾಕ್ಷಿಯು ಅದಕ್ಕೆ ಪೂರಕವಾಗಿ ವಿಭಾಗ ಪತ್ರ ಇರುತ್ತದೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ದಾಖಲು ಮಾಡುವ ಸಮಯದಲ್ಲಿ ನನ್ನ ದೊಡ್ಡಪ್ಪ ಬದುಕಿದ್ದರು. ಅವರೂ ಸಹಾ ದಾವೆಯ ಪಕ್ಷಗಾರರಾಗಿದ್ದರು. ಅವರು ಈ ದಾವೆಯಲ್ಲಿ ತಕರಾರು ಸಲ್ಲಿಸಿರುವುದಿಲ್ಲ ಎಂದರೆ ಸರಿ. ನನ್ನ ತಾಯಿಯೂ ಸಹಾ ಈ ದಾವೆಯಲ್ಲಿ ತನ್ನನ್ನು ಪಕ್ಷಗಾರರನ್ನಾಗಿ ಮಾಡಿಕೊಳ್ಳುವಂತೆ ಅರ್ಜಿ ದಾಖಲು ಮಾಡಿಲ್ಲ ಎಂದರೆ ಸರಿ. ನಾನು ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ವಿಭಾಗವಾಗಿತ್ತು ಹಾಗೂ ಕ್ರಯದ ಕರಾರು ಸಹಾ ಆಗಿತ್ತು ಎಂಬುದಾಗಿ ಸುಳ್ಳು ಸಾಕ್ಷ್ಯ ನುಡಿದು ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಡಿ-45 ರಂತೆ ಕ್ರಯಪತ್ರ ಬರೆದುಕೊಡುವಂತೆ ಮಾದಯ್ಯ ರವರು ಬದುಕಿದ್ದಾಗ ಯಾವುದೇ ದಾವೆಯನ್ನು ದಾಖಲು ಮಾಡಿರುವುದಿಲ್ಲ. ಸಾಕ್ಷಿಯು ಮುಂದುರವೆದು, ಅವರೇ ಖುದ್ದು ನಿಂತು ಐ ಎನ್ ಹೆಚ್ ನಂತೆ ಮಾಡಿಕೊಟ್ಟಿದ್ದರು ಎಂದು ನುಡಿಯುತ್ತಾರೆ. ದಾವಾ ಅನುಸೂಚಿತ ಸ್ವತ್ತು ಮಾದಯ್ಯನವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಹಾಜರು ಪಡಿಸಿರುವ ದಾಖಲಾತಿಗಳನ್ನು ಈ ದಾವೆಗಾಗಿ ಸೃಷ್ಟಿಸಿಕೊಡಿಂದ್ದೇವೆ ಎಂದರೆ ಸರಿಯಲ್ಲ. ಎ ಸಿ ನ್ಯಾಯಾಲಯದ ಆದೇಶವಾದ ನಂತರ ನಾವು ವಾದಿಯಿಂದ ಅಕ್ರಮವಾಗಿ ಸ್ವತ್ತನ್ನು ಕಸಿದುಕೊಂಡಿದ್ದೇವೆ ಎಂದರೆ ಸರಿಯಲ್ಲ. ಮಾದಯ್ಯರವರು ದಾವಾ ಅನುಸೂಚಿತ ಸ್ವತ್ತಿನ ಮಾಲೀಕರಾಗಿದ್ದ ಕಾರಣ ಅವರ ಮಕ್ಕಳುಗಳಿಗೆ ಮಾತ್ರ ಸದರಿ ಸ್ವತ್ತಿನಲ್ಲಿ ಹಕ್ಕು ಇರುತ್ತದೆ ಹಾಗಾಗಿ ಸ್ವತ್ತಿನ ಸ್ವಾಧೀನವನ್ನು ಅವರ ಮಕ್ಕಳಿಗೆ ಬಿಟ್ಟು ಕೊಡಬೇಕು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ

(ಕಾವ್ಯಶ್ರೀ. ಎಂ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ., ಕೊಳ್ಳೇಗಾಲ